# ಅಧ್ಯಾಯ 35

ಓಂ ಗಣೇಶಾಯ ನಮಃ     ಸದ್ಗುರು ಸಿದ್ಧಾರೂಢ ನಮಃ



ಧನದ ಭ್ರಾಂತಿ ಮುಮುಕ್ಷುವಿಗೆಯತ್ಯಂತರಾಯವು ಶ್ರವಣಕೆ
ಎನುತ ಸದ್ಗುರು ನಾಶಪಡಿಸಿದು ಪಾದಿಯಾತನ ಲಾಭಕೆ
ಗುರುವು ತಾಪದಿ ಬಳಲುತಿರುತಾ ಸ್ವೀಕರಿಸಿದನು ಜ್ವರವನು ವರ
ಸಮಾಧಿಯೊಳಿಟ್ಟು ಬ್ರಹ್ಮಾನಂದವನು ಭೋಗಿಸಿದನು..

ಹೇ ಸದ್ಗುರು ಸಿದ್ಧನಾಥನೇ, ಯಾವ ನಿನ್ನ ಚರಣಗಳ ಸ್ಪರ್ಶ ಮಾತ್ರದಿಂದ ಬ್ರಹ್ಮನು ಸಹಾ ತನ್ನ ಉಪಾಧಿಯನ್ನು ಹೋಗಲಾಡಿಸಿಕೊಳ್ಳಲಿಕ್ಕೆ ಇಚ್ಛಿಸುವನೋ, ಆ ಚರಣಗಳಲ್ಲಿ ನನ್ನ ಮಸ್ತಕವಿರಲಿ, ತ್ರಿಮೂರ್ತಿಗಳಿಗೆ ಸಹ ಉಪಾಧಿಗಳಿರುತ್ತವೆ.ಆದರೆ ನಿನಗೊಬ್ಬನಿಗೇ ಉಪಾಧಿ ಸಂಬಂಧವಿಲ್ಲವು, ನಿನ್ನನ್ನು ಭಜಿಸುವದರಿಂದಲೇ ಎಲ್ಲಾ ಉಪಾಧಿಗಳು ನಿವಾರಣವಾಗಿ ಬ್ರಹ್ಮವು ಹೃದಯದಲ್ಲಿ ಪೂರಿತವಾಗುವದು. ನೀನು ಕೃಪಾ ಮಾಡಿದ ಕೂಡಲೇ ದೇಹದೊಳಗಿರುತ್ತಾ, ಜೀವನು ವಿದೇಹ ಭಾವವನ್ನು ಹೊಂದವನು; ಮತ್ತು ನನ್ನ ರೂಪಗಳೇ ಎಲ್ಲವೆಂದು ತಿಳಿದು ತನ್ನೊಳಗೆ ಇಡೀ ಬ್ರಹ್ಮಾಂಡವನ್ನೇ ನೋಡುತ್ತಾನೆ. ಎಲ್ಲಿಯವರೆಗೆ ನಿನ್ನ ಚರಣಗಳು ಹತ್ತಲಿಲ್ಲವೋ, ಅಲ್ಲಿ ತನಕ ಸ್ತ್ರೀ ಪುತ್ರಾದಿಗಳೆಲ್ಲ "ನನ್ನವು , ನನ್ನವು' ಎಂದು ಜೀವನವನ್ನುತ್ತಾನೆ ಸದ್ಭಾವದಿಂದ ನಿನ್ನನ್ನು ಕುರಿತು ಶರಣು ಹೋದಾಕ್ಷಣವೇ ಮನಸ್ಸು ಬದಲಾಗುತ್ತದೆ. ಏನೇನೆಲ್ಲಾ "ನನ್ನದು' ಎಂದು ಹೇಳುತ್ತಿದ್ದನೋ, ಅದೆಲ್ಲಾ ನಿನ್ನ

ರೂಪಗಳಾಗುವವು. ಅಹಂ ಮಮತೆಯ ಭಾರವನ್ನು ವಹಿಸದೆ ಇರುವವನಾಗಿ ನಿನ್ನ ಹೊರತು ಎರಡನೇದು ಏನೇನು ಸಹನವಾಗುವದಿಲ್ಲ. ಸುಖದ ವಿಷಯಗಳೆಂಬವು ಯಾವ್ಯಾವವಿದ್ದವೋ, ಅವುಗಳ ಮೇಲಿನ ರಾಗವೆಲ್ಲ ಹಾರಿಹೋಗುವದು. ರಾಗದ ಅಭಾವದಿಂದ ಬ್ರಹ್ಮಮಯವಾದ ಸದ್ವಸ್ತು ಒಂದೇ ಉಳಿಯುತ್ತದೆ. ಈ ಪ್ರಕಾರ ಜ್ಞಾನದ ಅಭ್ಯಾಸವು ನಿನ್ನ ಕೃಪೆಯಿಂದ ಗಳಿಗೆ ಘಳಿಗೆಗೆ ನಡಿಯುತ್ತಿದ್ದು, ದೃಢಜ್ಞಾನವು ಪ್ರಾಪ್ತವಾದ ಕೂಡಲೇ ಈ ಮಾಯಾ ಪ್ರಪಂಚವು ಕ್ಷಣದಲ್ಲಿ ಮುರಿದು ಹೋಗುವುದು. ಚರಿತ್ರ ಕಥೆಯನ್ನು ಶ್ರವಣ ಮಾಡುವದರಿಂದ ಕರ್ಣಗಳು ಪವಿತ್ರವಾಗುವವು, ಮತ್ತು ದೋಷ ಗುಣಗಳೆಲ್ಲಾ ಕರಗಿ

ಹೋಗಿ ಮನವು ಉನ್ಮನಕ್ಕೆ ಹೋಗುವದು. ಶ್ರೀ ಸಿದ್ಧಾರೂಢ ಸದ್ಗುರುನಾಥನು ಸಿದ್ಧಾಶ್ರಮದಲ್ಲಿ ಶೋಭಿಸುತ್ತಿರುವಾಗ,ಮಹಿಶೂರ ಪ್ರಾಂತದಿಂದ ಒಬ್ಬ ಸದ್ಭಕ್ತನು ಅವರಿಗೆ ಶರಣು ಬಂದನು. ಸದ್ಗುರುಗಳು ಆತನ ಮುಖದ ಕಳೆಯನ್ನು ನೋಡಿ, ಈತನು ಭೋಳೆ ಸ್ವಭಾವದ

ಭಕ್ತನಿದ್ದಾನೆಂದು ತಿಳಿದು ಅವನಿಗೆ ಭೋಳೆ ಭಕ್ತನೆಂದೆ ಹೆಸರಿಟ್ಟರು. ಸದ್ಗುರುಗಳನ್ನು ಕುರಿತು, ಆತನು ಪ್ರಾರ್ಥಿಸುತ್ತಾನೆ- "ಹೇ ಸಿದ್ಧಾರೂಢನೇ, ನಿನ್ನ ಕೀರ್ತಿಯನ್ನು ಕೇಳಿ, ನಾನು ನಿನಗೆ ಶರಣು ಬಂದಿರುತ್ತೇನೆ, ನೀನು ಕೃಪಾಳುವಾದ ಸದ್ಗುರು ಇರುವಿ, ದೀನನಾದ ನನ್ನನ್ನು ತಾರಿಸು. "ಸದ್ಗುರುಗಳು ಆತನ ಪ್ರಾರ್ಥನೆಯನ್ನು ಸ್ವೀಕರಿಸಿ - ಬೋಳೆ ಭಕ್ತನೇ ನೀನು ವೇದಾಂತ ಶ್ರವಣಕ್ಕೆ ಬರುತ್ತಿರು, ಸೇವೆಯನ್ನೂ ಮಾಡುತ್ತ ಇದ್ದಿಯೆಂದರೆ ನಿಶ್ಚಯವಾಗಿ ನಿನಗೆ ಕಲ್ಯಾಣವಾಗುವದು," ಎಂದು ಹೇಳಿದರು. ಅನಂತರ ಭೋಳೆ ಭಕ್ತನು ಊರೊಳಗೆ ಒಂದು ಬಿಡಾರ ಮಾಡಿಕೊಂಡು ಇದ್ದು, ನಿತ್ಯದಲ್ಲಿಯೂ ಸಿದ್ಧಾಶ್ರಮಕ್ಕೆ ಬಂದು ವೇದಾಂತ ಶ್ರವಣ ಮಾಡುತ್ತಿದ್ದನು. ಅವನ ಹತ್ತಿರ ಒಂದು ಹಣದ ಗಂಟು ಇದ್ದುದ್ದರಿಂದ ಅವನ ಮನಸ್ಸು ಬಹಳ ಚಂಚಲವಾಗುತ್ತಿತ್ತು. ವೇದಾಂತ ಶ್ರವಣಕ್ಕೆ ಕುಳಿತಿರುವಾಗ, ಮನಸ್ಸು ಮನೆಯ ಕಡೆಗೆ ಹೋಗುವದು. ಮನೆಯಲ್ಲಿ ಹಾಸಿಗೆ ಮೇಲೆ ಮಲಗಿಕೊಂಡಿರುವಾಗ, - ಕಳ್ಳರು ಕನ್ನ ಇಕ್ಕಿ ಒಳಗೆ ಬಂದು

ದ್ರವ್ಯ ಎಲ್ಲಾ ಕದ್ದುಕೊಂಡು ಹೋದರೆ ಹೊಟ್ಟೆದಶೆಯಿಂದ ಏನು ಮಾಡೋಣ ಎಂದು ಚಿಂತೆ ಮಾಡುವನು. ಈ ಪ್ರಕಾರ ಚಿಂತೆಯಿಂದ ಆತನಿಗೆ ರಾತ್ರಿ ನಿದ್ದೆ ಬರುತ್ತಿರಲಿಲ್ಲ. ಮರುದಿನ ಮಠಕ್ಕೆ ಹೋಗಿ ಶ್ರವಣಕ್ಕೆ ಕುಳಿತಾಗ, ನಿದ್ರೆ ಬಂದು ತೂಕಡಿಸುತ್ತಿದ್ದನು, ಅಥವಾ ಕಳ್ಳರ ಭಯದಿಂದ ಮನಸ್ಸು ಮನೆಯಲ್ಲಿದ್ದ ಹಣದ ಕಡೆಗೆ ಹೋಗುತ್ತಿತ್ತು. ಇಂಥಾ ಸ್ಥಿತಿಯನ್ನು ಸದ್ಗುರುಗಳು ನೋಡಿ, "ಈತನಿಗೆ ಮನಸ್ಸಿನಲ್ಲಿ ಚಿಂತೆ ಬಹಳ ಇರುವುದು. ಈತನಲ್ಲಿ ಖಚಿತವಾಗಿ ಮುಮುಕ್ಷು ಲಕ್ಷಣಗಳಿರುವವು, ಆದರೆ ಧನ ಒಂದೇ ಅಂತರಾಯವಿರುವದು", ಎಂದು ಚಿಂತಿಸುವವರಾದರು. ಒಂದಾನೊಂದು ರಾತ್ರಿ ಕಾಲದಲ್ಲಿ ಆ ಭೋಳೆ ಭಕ್ತನು, ಚಿಂತೆಯಿಂದ ಬಹಳ ರಾತ್ರೆ ತನಕ ಎಚ್ಚರ ಇದ್ದು, ತುಸು ರಾತ್ರಿ ಇರುವಾಗ ನಿದ್ದೆ ಹೋದನು. ಅದೇ ಸಮಯದಲ್ಲಿ ಕಳ್ಳರು ಮನೆಯ ಬಾಗಿಲು ಒಡೆದು ಒಳಗೆ ಬಂದು, ಭೋಳೆ ಭಕ್ತನಿಗೆ ಹಿಡಿದು ಒದರದಂತೆ ಅವನ ಬಾಯಿಯೊಳಗೆ ಅರಿವೆಯನ್ನು ತುಂಬಿ ಒಂದು ಕಂಬಕ್ಕೆ ಅವನನ್ನು ಬಿಗಿದು ಕಟ್ಟಿದರು.

ಆನಂತರ ಅವನ ದ್ರವ್ಯವನ್ನೆಲ್ಲಾ ತೆಗೆದುಕೊಂಡರು. ಆ ಸಮಯದಲ್ಲಿ ಆತನಿಗೆ ಯಾರು ಸಹಾಯ ಮಾಡಲಿಲ್ಲ. ದ್ರವ್ಯಲೋಭವು ಆತನನ್ನು ಪೂರ್ಣವಾಗಿ ವ್ಯಾಪಿಸಿಕೊಂಡು, ಮನಸ್ಸಿನಲ್ಲಿ ಸದ್ಗುರು ಸ್ಮರಣೆಯೂ ಬರಗೊಡಲಿಲ್ಲ. ಕಳ್ಳರಾದರೂ ಅವನ ವಸ್ತ್ರಗಳನ್ನು ಸಹಾ ಕದ್ದುಕೊಂಡು, ಅವನಿಗೆ ಒಂದು ಕೌಪೀನದ ಮೇಲೆ ಬಿಟ್ಟು, ಹೊರಟು ಹೋದರು. ಕಳ್ಳರೆಲ್ಲಾ ಹೋದ ಬಳಿಕ, ನೆರೆಯವರು ಬಂದು ನೋಡುವಾಗ, ಕೌಪೀನಧಾರಿಯಾಗಿ ಸ್ತಂಭಕ್ಕೆ ಕಟ್ಟಲ್ಪಟ್ಟ ಭೋಳೆ ಭಕ್ತರನ್ನು ಕಂಡರು. ಅವನ ಮೇಲೆ ಬಹಳ ದಯಾ ಹುಟ್ಟಿ, ಅವರು ಆತನನ್ನು ಬಿಚ್ಚಿಬಿಟ್ಟರು. ಆತನು ನೆಟ್ಟಗೆ ಸಿದ್ಧಾರೂಢ ಸದ್ಗುರುಗಳ ಕಡೆಗೆ ಬಂದು, ಅವರ ಪಾದಕ್ಕೆ ಬಿದ್ದು, ವರ್ತಮಾನವನ್ನು ಹೇಳಿ ಅಳಲಾರಂಭಿಸಿದನು. ಅದಕ್ಕೆ ಸದ್ಗುರುಗಳನ್ನುತ್ತಾರೆ - "ದುಃಖವನ್ನು ಯಾವಾಗಲೂ ಕಲ್ಯಾಣಕ್ಕೋಸ್ಕರವಾಗಿ ಈಶ್ವರನು ಕೊಡುತ್ತಾನೆ. ಲೋಕದಲ್ಲಿ ಷಡ್ರಿಪುಗಳು ನಿತ್ಯದಲ್ಲಿಯೂ ಜನರೊಳಗಿಂದ ಮಹತ್‌ಧನವನ್ನು ಕದ್ದುಕೊಳ್ಳುತ್ತವೆ. ಜೀವನಿಗೆ ಅಂಥಾ

ಧನಕ್ಕಿಂತ ಹೆಚ್ಚಿನ ಧನವೇ ಇಲ್ಲ. ಅದು ನಾಶವಾದರೂ ಯಾರು ಫಾಬರಿಯಾಗುವದಿಲ್ಲ. ಹೀಗಿರುವಾಗ, ಇಂಥಾ ಕ್ಷಣಿಕವಾದ ಧನದ್ದೆಶೆಯಿಂದ ನೀನು ಚಿಂತೆ ಮಾಡುವುದು ಯೋಗ್ಯವಲ್ಲ. ಮುಂದೆ ನಿನಗೆ ಅದ್ಭುತವಾದ ಧನ ಸಿಕ್ಕಿತು ಮತ್ತು ಆ ಧನವು ನಿನ್ನ ಹತ್ತಿರ ಶಾಶ್ವತವಾಗಿ ಉಳಿಯುವುದು'. ಈ ಪ್ರಕಾರ ಸದ್ಗುರುನಾಥನು ಅಂದು, ಆತನಿಗೆ ತನ್ನ ಮೈಮೇಲಿನ ಧೋತರವನ್ನು ತೆಗೆದುಕೊಟ್ಟನು. ಆಗ ಭೋಳೆಭಕ್ತನು - "ನಾನು ಎಲ್ಲಿಗೆ ಹೋಗಲಿ, ನಿನ್ನ ಚರಣಗಳಲ್ಲಿಯೇ ಇರುವೆನು. ಭಿಕ್ಷೆಯಿಂದ ಉದರವನ್ನು ತೃಪ್ತಿಪಡಿಸಿ, ಚಿತ್ತವನ್ನು ನಿನ್ನ ಪಾದದಲ್ಲಿಯೇ ಇಡುವೆನು' ಎಂದು ಅಂದದ್ದು ಕೇಳಿ ಸದ್ಗುರುಗಳು, ಆನಂದದಿಂದ ಆತನನ್ನು ಆಲಂಗಿಸಿ, "ಭೋಳೆಭಕ್ತ ಎಂಬ ನಾಮವು ನಿನಗೆ ಈಗ ಒಪ್ಪುವುದು. ನೀನು ಸುಖದಿಂದ ಮಠದೊಳಗೆ ಇರು." ಎಂದು ಹೇಳಿದರು. ಕಳ್ಳರು ಆತನ ದ್ರವ್ಯ ಹರಣ ಮಾಡಿಕೊಂಡು ಹೋದಂದಿನಿಂದ ಅವನ ಚಿಂತೆ ಎಲ್ಲಾ ಹೋಗಿಬಿಟ್ಟಿತು.

ರಾತ್ರಿಯಲ್ಲಿ ಸುಖದಿಂದ ನಿದ್ದೆ ಮಾಡುತ್ತಿದ್ದು, ಶ್ರವಣ ಕಾಲದಲ್ಲಿ ನಿದ್ದೆ ಬರುತ್ತಿದ್ದಿಲ್ಲ.

ವೇದಾಂತ ಶ್ರವಣದಲ್ಲಿ ಚಿತ್ತೈಕಾಗ್ರತೆ ಹೊಂದಿ, ಎಲ್ಲಾ ವಿಷಯ ವಾಸನೆಗಳು ನಾಶವಾದವು, ಮತ್ತು ಹೃದಯದಲ್ಲಿ ವೈರಾಗ್ಯವು ಉತ್ಪನ್ನವಾಯಿತು. ಅನ್ಯ ವಿಷಯಗಳಿಂದ ಮನಸ್ಸು ಆಕರ್ಷಿಸಲ್ಪಡದೆ, ಚಿತ್ತವು ಸದ್ಗುರು ಸೇವೆಯಿಲ್ಲಯೇ ರಮಿಸುವಂಥಾದ್ದಾಯಿತು.  ಒಂದಾನೊಂದು ಸಮಯದಲ್ಲಿ ಸದ್ಗುರುಗಳಿಗೆ ಚಳಿಜ್ವರ ಬಂದು ಬಹಳ ನರಳುತ್ತಿದ್ದರು. ಆಗ ಶಿವರಾತ್ರಿಯ ಮಹೋತ್ಸವ ಕಾಲವೂ ಸಮೀಪ ಬಂತು. ಭಕ್ತರೆಲ್ಲಾ ಅತ್ಯಂತ ಚಿಂತಾಕ್ರಾಂತರಾಗಿದ್ದು ಸದ್ಗುರುಗಳಿಗೆ ತಿಳಿದು, ಉತ್ಸವದ್ದಶೆಯಿಂದ ಬಂದಂಥಾ ಸಮಸ್ತ ಜನರು ನಿರಾಶೆಯಾಗಿ ಹೋಗುವರೆಂದು ಚಿಂತಿಸುವಂಥವರಾದರು. ಆಗ ಸಿದ್ಧರು ಏನು ಮಾಡಿದರೆಂದರೆ - ತನ್ನ ಅತ್ಯಂತ ಸಮೀಪದ ಭಕ್ತಜನರನ್ನು ಕರೆದು ಪ್ರತಿ ಒಬ್ಬನಿಗೆ ಚಳಿ ಜ್ವರ ತಗೆದುಕೊಳ್ಳುವಿಯಾ ?" ಎಂದು ಕೇಳುತ್ತಿದ್ದರು. ಒಬ್ಬ ನಂದನು - "ನಾನು ಜ್ವರದಿಂದ ಬಿದ್ದರೆ ಮನೆಯಲ್ಲಿ ಹೆಂಡತಿ ಮಕ್ಕಳು

ಘಾಬರಿಯಾಗುವವರು." ಮತ್ತೊಬ್ಬನು - "ನನಗೆ ವ್ಯವಹಾರದಲ್ಲಿ ಬಹಳ ಜರೂರಿನ ಕೆಲಸಗಳಿವೆ," ಎಂದು ಹೇಳಿದನು.

ಇನ್ನೊಬ್ಬನು - "ನನ್ನ ಸ್ತ್ರೀ ಗರ್ಭಿಣಿ ಇರುತ್ತಾಳೆ", ಬೇರೊಬ್ಬನು - ನನಗಿನ್ನೂ ಲಗ್ನವಾಗಿಲ್ಲ," ಮತ್ತೊಬ್ಬನು - "ನನ್ನ ಕಾಂತೆಯು ಬಹಳ ತರುಣಿಯಿದ್ದಾಳೆ. ನಾನು ಸತ್ತರೆ ಏನು ಮಾಡುವದು ?" ಎಂದು ಈ ಪ್ರಕಾರ ಅಂದು ಮೆಲ್ಲ ಮೆಲ್ಲನೆ ಹೊರಟು ಹೋದರು. ಆಗ ಸನ್ಯಾಸಿ ಶಿಷ್ಯರು ಉಳಿದರು. ಅವರಿಗೆ ಸ್ವಾಮಿಯವರು ಕೇಳಿದಾಗ, ಒಬ್ಬನು - "ನನಗೆ ಕರೆದುಕೊಂಡು ಹೋಗಲಿಕ್ಕೆ ಭಕ್ತರು ಬಂದಿರುವವರು," ಮತ್ತೊಬ್ಬನು- "ನನ್ನ ಶಾಸ್ತ್ರಾಭ್ಯಾಸವು ಪೂರ್ಣವಾಗಲಿಲ್ಲ. ಇನ್ನೂ ಶೇಷ ಉಳಿದಿರುವುದು, ಇನ್ನೊಬ್ಬನು - "ನಾನು ನಾಳಿನ ದಿವಸ ಕ್ಷೇತ್ರ ಯಾತ್ರೆಗೆ ಹೋಗವವನಿದ್ದೇನೆ' ಎಂದು ನಾನಾ ಪ್ರಕಾರದ ನೆವಗಳನ್ನು ಹೇಳಿ ಎಲ್ಲರೂ ತಪ್ಪಿಸಿಕೊಳ್ಳುವಂಥವರಾದರು. ಆಗ ಸಿದ್ಧರು ಭೋಳೆ ಭಕ್ತನಿಗೆ - "ನೀನು ಈ ಚಳಿ ಜ್ವರವನ್ನು ತೆಗೆದುಕೊಳ್ಳುವಿ ಏನು ?" ಎಂದು ಕೇಳಿದರು. ಅದಕ್ಕೆ ಭೋಳೆ ಭಕ್ತನು- "ಮಹಾ ಪ್ರಸಾದವಾದ ಈ ಚಳಿ ಜ್ವರವನ್ನು

ಅವಶ್ಯವಾಗಿ ನನಗೆ ಕೊಡಬೇಕು. ಆದರೆ ನಾನು ಸತ್ತರೆ ನಿನ್ನ ಮೇಲೆ ನಿಮಿತ್ತ ಬರಬಾರದು, ಈ ಪ್ರಕಾರ ಮಾಡು.ನಿನ್ನ ಸನ್ನಿಧಿಯಲ್ಲಿ ನಾನು ಸತ್ತದ್ದಾದರೆ, ನಾನು ಧನ್ಯನಾದನೆಂದು ತಿಳಿಯುವೆನು. ನಿನ್ನ ಸೇವೆ ಮಾಡುವದರಿಂದ ಇನ್ನೂ ನನಗೆ ತೃಪ್ತಿಯಾಗಲಿಲ್ಲ, ಆದ್ದರಿಂದ ಈ ಜ್ವರಾನುಭೋಗ ರೂಪ ಸೇವೆಯನ್ನು ನನಗೆ ದಯಪಾಲಿಸಬೇಕು," ಎಂದು ಪ್ರಾರ್ಥಿಸಿದನು. ಈ ಪ್ರಕಾರ ಭೋಳೆ ಭಕ್ತನ ವಚನವನ್ನು ಕೇಳಿ, ಸದ್ಗುರುಗಳು ಅತ್ಯಂತ ಸಂತೋಷಪಟ್ಟು, "ಹಾಗಾದರೆ ಜ್ವರವನ್ನು ತೆಗೆದುಕೋ" ಎಂದು ಅವನನ್ನು ತಮ್ಮ ಹಸ್ತದಿಂದ ಸ್ಪರ್ಶಿಸಿ ಜ್ವರವನ್ನು ಕೊಟ್ಟರು. ಕೂಡಲೇ ಭೋಳೆ ಭಕ್ತನಿಗೆ ಜ್ವರ ಬಂತು, ಮತ್ತು ಸದ್ಗುರುಗಳು ನಿರೋಗಿಗಳಾಗಿ ಎದ್ದು ಕುಳಿತರು. ಆಗ ಎಲ್ಲಾ ಭಕ್ತರಿಗೂ ಆನಂದವಾಯಿತು; ಮತ್ತು ಉತ್ಸವವು ಯಥಾಸಾಂಗವಾಗಿ ನಡೆಯಿತು. ಉತ್ಸವ ಕಾಲದಲ್ಲಿ ಸಿದ್ಧರಾಯರು ಕ್ಷಣ ಕ್ಷಣಕ್ಕೆ ಭೋಳೆ ಭಕ್ತನ ನಿಸ್ಸೀಮ ಭಕ್ತಿಯನ್ನು ನೆನೆಸುತ್ತಿದ್ದರು. ಮತ್ತು ಗಳಿಗೆ ಘಳಿಗೆಗೆ ಅವನ ಹತ್ತರ ಬಂದು ನೋಡಿ, -"ಅಂಜಬೇಡ ಅಂಜಬೇಡ'

ಅನ್ನುತ್ತಿದ್ದರು. ಮಹೋತ್ಸವ ತೀರಿದ ಕೂಡಲೇ ಸದ್ಗುರುಗಳು ಆತನ ಸಮೀಪ ಬಂದು, - ಜ್ವರವನ್ನು ಈಗ ತಿರುಗಿ ತೆಗೆದುಕೊಳ್ಳುವೆನು', ಎಂದು ಹೇಳಿದ್ದನ್ನು ಕೇಳಿ ಭೋಳೆ ಭಕ್ತನು, -"ನೀನು ಜ್ವರವನ್ನು ತೆಗೆದುಕೊಂಡದ್ದಾದರೆ, ಅನೇಕ ಭಕ್ತ ಜನರಿಗೆ ದುಃಖವಾಗುವದು," ಎಂದು ಅಂದನು. ಅದಕ್ಕೆ ಸಿದ್ಧರು - "ನೀನು ಜ್ವರದಿಂದ ಮಲಗಿದರೆ, ನನಗೆ ಅತ್ಯಂತ ದುಃಖವಾಗುವದಲ್ಲ," ಎಂದು ಕೇಳಿದ್ದಕ್ಕೆ ಆತನು - "ಈ ಜ್ವರವೂ ನನಗೆ ಬೇಕಾಗಿದೆ, ನಾನು ಇದನ್ನು ಎರಡನೇಯವರಿಗೆ ಕೊಡಲೊಲ್ಲೆ. ನೀನು ಸ್ವಸ್ಥವಾಗಿರುವದನ್ನು ನೋಡಿದರೆ ಸಾಕು, ನನಗೆ ಆನಂದವಾಗುವದು." ಎಂದು ನುಡಿದನು. ಈ

ವಚನವನ್ನು ಕೇಳಿ, ಸರ್ವರು, "ಈತನು ಧನ್ಯನು ಧನ್ಯನು, ದೇಹ ಮಮತೆಯನ್ನು ಬಿಟ್ಟು ಗುರು ಕೃಪೆಗೆ ಪೂರ್ಣ ಪಾತ್ರನಾಗಿದ್ದಾನೆ," ಎಂದು ಅನ್ನುವಂಥವರಾದರು. ಸಿದ್ಧಗುರುಗಳ ಬಹಳ ಸಂತೋಷಯುಕ್ತರಾಗಿ, ಆ ಭೋಳೆ ಭಕ್ತನ

ಮೈಯನ್ನು ತನ್ನ ಅಮೃತ ಹಸ್ತದಿಂದ ಸ್ಪರ್ಶಿಸಿ ಆತನ ಜ್ವರವನ್ನು ಹೋಗಲಾಡಿಸಿದರು. ಆ ಕೂಡಲೇ ಆತನು ಎದ್ದು ಕುಳಿತುಕೊಂಡು, ಅಳಲಾರಂಭಿಸಿ, "ನನಗೆ ಯಾಕೆ ಸ್ವಸ್ಥ ಮಾಡಿದಿ ? ಈಗ ನೀನು ಜ್ವರದಿಂದ ಮಲಗಿದ್ದಾದರೆ, ನನ್ನಿಂದ ಆ ದುಃಖವು ಸಹಿಸಲಾಗದೆ ನಾನು ಪ್ರಾಣವನ್ನು ಕೊಡುವೆನು.' ಎಂದು ಅಂದ ವಚನ ಕೇಳಿ ಸದ್ಗುರುಗಳು, -"ಆ ರೋಗದ ಬಾಧೆ ತೀರಿತು. ಇನ್ನು ಮೇಲೆ ಬರಲಾರದು. ನೀನು ನಿಶ್ಚಿಂತನಾಗಿರು ಎಂದು ಹೇಳಿದರು.

ಒಂದಾನೊಂದು ದಿನ ತಾಸು ರಾತ್ರಿಯಾಗುತ್ತಲೇ, ಭೋಳೆ ಭಕ್ತನಿಗೆ ಸದ್ಗುರುಗಳು ಸಮೀಪ ಕರಿಸಿ, - "ನಾನು ಹೊರಗೆ ಹೋಗುವೆನು. ನೀನು ನನ್ನ ಸಂಗಡಲೇ ಬಾ," ಎಂದು ಹೇಳಿದ್ದಕ್ಕೆ, ಸದ್ಗುರು ವಚನವನ್ನು ಮಾನ್ಯ ಮಾಡಿ, ಭೋಳೆ ಭಕ್ತನು ತತ್ಕಾಲ ಸಿದ್ಧರ ಹಿಂದೆ ಹೊರಟನು. ಇಬ್ಬರೂ ಕತ್ತಲೆಯೊಳಗೆ ಹೋಗುತ್ತಿರುವಾಗ, ಭೋಳೆ ಭಕ್ತನು ತನ್ನ ಮುಂದೆ ನಡೆಯುತ್ತಿರುವ ಸದ್ಗುರು ಮೂರ್ತಿಯಲ್ಲಿಯೇ ಲಕ್ಷವಿಟ್ಟು ನಡೆಯುತ್ತಿದ್ದನು. ಆಗ ಅಕಸ್ಮಾತ್ತಾಗಿ, ಆ

ಗುರುಮೂರ್ತಿಯು ಮುಂದೆ ಇರುವ ಬಾವಿಯೊಳಗೆ ಬೀಳುವುದನ್ನು ಕಂಡನು. ಆಗ ಗಡಬಡಿಸಿ ಭೋಳೆ ಭಕ್ತರು ಓಡಿ, ತತ್ಕ್ಷಣವೇ ಆ ಕೂಪದಲ್ಲಿ ತಾನೂ ಧುಮುಕಿದನು. ತುಸು ನೀರು ಇರುತ್ತಿದ್ದ ಆ ಭಾವಿಯೊಳಗೆ ಬಿದ್ದು ಆತನ ಮೈಯಲ್ಲಾ ಜರ್ಜರವಾಗಿ ಹೋಯಿತು. ಆದರೂ ಮನಸ್ಸಿನ ನಿರ್ಧಾರವನ್ನು ಬಿಡದೇ, ಅತಿ ದುಃಖದಿಂದ ಸದ್ಗುರುವನ್ನು

ಸ್ಮರಿಸುವಂಥವನಾದನು. ಆ ಕೂಡಲೆ ಆತನು ತನ್ನ ಕಣ್ಣೆದುರಿಗೆ ವಿದ್ಯುಲ್ಲತೆಯಂಥಾ ಒಂದು ಪ್ರಕಾಶವನ್ನು ಕಂಡನು. ಆ ಪ್ರಕಾಶವನ್ನು ನೋಡುತ್ತಾ, ನೋಡುತ್ತಾ, ಮನಸ್ಸಿನಲ್ಲಿ ಅತ್ಯಂತ ಆನಂದಭರಿತನಾದನು. ಆಗ ಪ್ರಕಾಶದ ಮಧ್ಯದಲ್ಲಿ ಸದ್ಗುರು ರೂಪವನ್ನು ಕಂಡು, ತತ್ಕಾಲವೇ ಎದ್ದನು, ಮತ್ತು ಹಾರಿ, ಆ ರೂಪವನ್ನು, ಎರಡೂ ಕೈಗಳಿಂದ ತೆಕ್ಕೆ ಹಾಕಿ ಅತಿ ಪ್ರೇಮದಿಂದ ಆಲಿಂಗಿಸುತ್ತಿರುವಾಗ, ಅದರೊಳಗೆ ಐಕ್ಯತ್ವವನ್ನು ಹೊಂದಿ, ಅಖಂಡಾನಂದ ಸಾಗರದಲ್ಲಿ

ಮುಳುಗಿ ಹೋದನು. ದೇಹ ಭಾನವು ತಪ್ಪಿ ಹೋಯಿತು; ಗುರು ಶಿಷ್ಯ ಎಂಬ ಭೇದವು ಕರಗಿ ಹೋಯಿತು, ಮತ್ತು ಈ ಕಾಲದಲ್ಲಿ ಗುರು ಸ್ವರೂಪದಲ್ಲಿ ತಲ್ಲೀನನಾಗಿ ಹೋಗುವಂಥವನಾದನು. ಹೀಗೆ ಐದು ಗಳಿಗೆವರೆಗೆ ಐಕ್ಯ ಭಾವದೊಳಗೆ ಲೀನವಾಗಿದ್ದು, ಪುನಃ ಭೋಳೆ ಭಕ್ತನು ಐಕ್ಯತ್ವ ಶಿಥಿಲವಾಗಿ, ಸದ್ಗುರು ರೂಪಕ್ಕೆ ಬೇರೆಯಾಗಿ, ಅದನ್ನು ತನ್ನೆದುರಿಗೆ ನೋಡುತ್ತ ಇದ್ದನು. ಆದರೆ ಆ ಐಕ್ಯತ್ವದ ಅನುಭವವು ಮರೆಯದೆ ಅಖಂಡಾನಂದದಲ್ಲಿ ಇರುತ್ತಿದ್ದನು. ಅನಂತರ ಮೆಲ್ಲ ಮೆಲ್ಲನೆ ಆ ಪ್ರಕಾಶವು ಕುಂದುತ್ತ ನಡೆಯಿತು, ಮತ್ತು ಅದರ ಕೂಡ ಸದ್ಗುರು ರೂಪವೂ ಅದೃಶ್ಯವಾಯಿತು. ಆದರೆ ಆನಂದವು ಖಂಡಿಸಲ್ಪಡದೆ, ಭೋಳೆ ಭಕ್ತನು ಉನ್ಮತ್ತನಂತಿದ್ದನು. ಆನಂದ ಸಮುದ್ರದಲ್ಲಿ ಮುಳುಗಿಕೊಂಡು, ನಾಲ್ಕು ಘಳಿಗೆ ತನಕ ಇದ್ದು, ಆಮೇಲೆ ದೇಹದ ಮೇಲೆ ಸ್ವಲ್ಪ ಸ್ಮೃತಿ ಬಂದ ಕೂಡಲೇ ದೇಹ ದುಃಖವೂ ನೆನಪಿಗೆ ಬಂತು. ಅಷ್ಟರಲ್ಲಿ ಭಾವಿಯ ಮೇಲಿಂದ ಸದ್ಗುರು ಧ್ವನಿಯು ಕೇಳಬಂತು. ಕೂಡಲೇ ದುಃಖವನ್ನೆಲ್ಲಾ ಮರೆತು ಬಿಟ್ಟನು. ಸದ್ಗುರುಗಳು

ಅನ್ನುತ್ತಾರೆ - 'ಹೇ ಭೋಳ ಭಕ್ತನೆ, ನನ್ನ ಪ್ರಿಯನೇ ನೀನು ಎಲ್ಲಿರುತ್ತೀ, ಕಾಣಿಸುವದಿಲ್ಲ," ಅಂದದ್ದು ಕೇಳಿ, ಆತನು, - "ನಾನು ಇಲ್ಲಿ ಭಾವಿಯೊಳಗಿರುವೆನು' ಎಂದು ಉತ್ತರ ಕೊಟ್ಟನು. ಆಗ ದಯಾಳುವಾದ ಸಿದ್ಧರು ತಮ್ಮ ಹಸ್ತಗಳನ್ನು ಉದ್ದ ಮಾಡಿ, ಎರಡೂ ಕೈಗಳಿಂದ ಆ ಭೋಳೆ ಭಕ್ತರನ್ನು ಹಿಡಿದು, ಭಾವಿಯೊಳಗಿಂದ ಎತ್ತಿ ಮೇಲಕ್ಕೆ ತಗೊಂಡರು. ಆಗ ಸದ್ಗುರುಗಳು ಆತನನ್ನು ನೋಡಿ ಬಹು ಪ್ರೇಮದಿಂದ ದೃಢಾಲಿಂಗನವನ್ನು ಕೊಟ್ಟರು. ಕೂಡಲೇ ಭೋಳೆ ಭಕ್ತನ ಶರೀರ ದುಃಖವೆಲ್ಲಾ ಹೋಗಿ ಪೂರ್ಣ ಸದೃಢನಾದನು. ಸದ್ಗುರುನಾಥನು ಆತನ ಮೇಲಿನ ಅತ್ಯಂತ ಕೃಪೆಯಿಂದ ಸಮಾಧಿ ಸುಖವನ್ನೇ ಕೊಡುವಂಥವನಾದನು. ಸದ್ಗುರುವಿನ ಕಾರ್ಯಗಳು - ವಿಚಿತ್ರವಾಗಿರುತ್ತವೆ. ಏನೇನೂ ಅರಿಯದ ಆ ಭೋಳೆ ಭಕ್ತನಿಗೆ ಆತ್ಮಜ್ಞಾನವನ್ನು ಪ್ರಾಪ್ತಮಾಡಿಕೊಟ್ಟನು. ವೇದ ಶಾಸ್ತ್ರದಿಗಳನ್ನೇನೂ ಪಠಿಸದೆ ಇದ್ದರೂ, ಆ ಭೋಳೆ ಭಕ್ತನು ಚಿತ್ತದಲ್ಲಿ ಶುದ್ಧಭಾವವನ್ನು ಧರಿಸಿ, ದೇಹಬುದ್ಧಿಯನ್ನು ಬಿಟ್ಟು, ಸದ್ಗುರು ಸೇವಾ ಮಾಡಿದ ಮಾತ್ರದಿಂದ ಪ್ರತ್ಯಕ್ಷ

ಬ್ರಹ್ಮರೂಪಾಗಿ ಹೋದನು. ಈ ಪ್ರಕಾರವಾದ ಭೋಳೆ ಭಕ್ತನ ಕಥೆಯನ್ನು ಶ್ರವಣ ಮಾಡಿದ ಮಾತ್ರದಿಂದ ಸರ್ವ ಪಾಪಗಳು ಸತ್ಯವಾಗಿ ನಾಶವಾಗುತ್ತವೆ. ಮತ್ತು ಸದ್ಗುರುನಾಥನ ಕೃಪೆಯಿಂದ ಜ್ಞಾನವೇ ಪ್ರಾಪ್ತವಾಗುವದು. ಈಗ ಕಥೆಯ ಲಕ್ಷ್ಯಾರ್ಥವನ್ನು ಕೇಳಿರಿ. ಭೋಳೆ ಭಕ್ತನು ಸದ್ಭಾವವೇ ಮೂರ್ತಿವಂತನಾದವನು. ಆ ಸದ್ಭಾವನಿಗಾದರೂ

ಒಮ್ಮೆ ವಿಷಯಾಸಕ್ತಿಯೆಂಬ ಧನವಿತ್ತು. ಅದನ್ನು ಉಪರತಿಯೆಂಬ ಕಳ್ಳನು ಕದ್ದುಕೊಂಡು ಹೋದನು. ಆಗ ವೈರಾಗ್ಯಾಗ್ನಿ ಜ್ವಾಲೆಗಳು ಎದ್ದು, ದೇಹಾಭಿಮಾನವೆಂಬ ತೃಣವನ್ನು ಸುಟ್ಟುಬಿಟ್ಟಿದ್ದರಿಂದ, ಸದ್ಭಾವನು ದೇಹಕ್ಕೆ ಉದಾಸೀನನಾಗಿ, ಜ್ವರವನ್ನು ಪ್ರೇಮದಿಂದ ತೆಗೆದುಕೊಂಡನು. ಆ ಸದ್ಗುರು ದಯಾಳನು, ಈ ಪ್ರಕಾರ ಭಕ್ತಿ ಪರೀಕ್ಷೆಯನ್ನು ತೆಗೆದುಕೊಂಡು, ಚಲೋ ತೇರ್ಗಡೆ ಹೊಂದಿದನೆಂದು ತಿಳಿದು, ಆತನಿಗೆ ಜ್ಞಾನವನ್ನು ಪ್ರಾಪ್ತಿ ಮಾಡಿಕೊಡುವದಕ್ಕೋಸ್ಕರ ಏಕಾಂತದಲ್ಲಿ ಕರಿಸಿಕೊಂಡನು. ಸಮಾಧಿಯೆಂಬ ಬಾವಿಯೊಳಗೆ ಸದ್ಗುರುವು ಬಿದ್ದದ್ದನ್ನು

ನೋಡಿ, ಭೋಳೆ ಭಕ್ತನು ತಾನೂ ದೇಹ ಬುದ್ಧಿಯನ್ನು ಬಿಟ್ಟು ಅದರೊಳಗೆ ಹಾರಿದನು, ಅದರಿಂದ ಇಂದ್ರಿಯಗಳೆಲ್ಲಾ ಏಕಳವಾದವು. ಅಲ್ಲಿ ಸ್ವರೂಪ ಪ್ರಕಾಶವನ್ನು ನೋಡಿದನು. ಆ ಪ್ರಕಾಶ ಮಧ್ಯದಲ್ಲಿ ಸುಂದರವಾದ ಸದ್ಗುರು ರೂಪವನ್ನು ನೋಡಿ, ಭೋಳೆ ಭಕ್ತನು ಆ ರೂಪದೊಳಗೆ ಏಕರಸನಾಗಿ, ಸಮಾಧಿಸುಖವನ್ನು ಅನುಭವಿಸುವಂಥವನಾದನು. ಸದ್ಗುರುವು ಪುನರುತ್ಥಾನ ಮಾಡಿದರೂ ಭೋಳೆ ಭಕ್ತನಿಗೆ ಆನಂದಾನುಭವವು ಉಳಿದು, ನಿತ್ಯದಲ್ಲಿಯೂ ಸಮಾಧಿಯನ್ನು ಪುನಃ ಪುನಃ ಭೋಗಿಸುತ್ತ ಬ್ರಹ್ಮಜ್ಞಾನಿಯಾಗಿ ಹೋದನು. ದೇಹ ಮಮತಾ

ಒಂದು ಬಿಟ್ಟಿರುವದರಿಂದ ಸದ್ಗುರು ರೂಪದಲ್ಲಿ ಐಕ್ಯತ್ವವನ್ನು ಹೊಂದಿದನು. ಇದರ ಹೊರ್ತು ಮುಕ್ತಿ ಎಂಬುದು ಬೇರೆ ಇಲ್ಲ. ಮೋಕ್ಷವು ತತ್ಕಾಲ ಪ್ರಾಪ್ತವಾಗ ಬೇಕಾದರೆ ದೇಹಾಭಿಮಾನವನ್ನು ಬಿಡಬೇಕು ಎಂಬ ಶ್ರೀ ತುಕಾರಾಮ ಉದ್ಗಾರವು ಇಲ್ಲೇ ದೃಷ್ಟಾಂತಕ್ಕೆ ಬರುವಂಥಾದ್ದಾಯಿತು. ಪ್ರತ್ಯಕ್ಷ ಶ್ರೀ ಸದ್ಗುರುನಾಥನ ರೂಪದಿಂದಲೇ ಇಲ್ಲಿ ಸರ್ವ

ವೇದಾರ್ಥವು ಮೂರ್ತಿಮಂತವಾಗಿರುವದು. ಆತನನ್ನು ಸತ್ಯವಾಗಿ ವರ್ಣಿಸಲಿಕ್ಕೆ ನನ್ನ ಮತಿಯು ಸಾಕಾಗುವುದಿಲ್ಲ. ಆದರೂ ಆತನು ಗ್ರಂಥವನ್ನು ಬರಿಸುತ್ತಾ ಇದ್ದಾನೆ. ಮುಂದಿನ ಅಧ್ಯಾಯದೊಳಗಿನ ಸುರಸವಾದ ಕಥೆಯನ್ನು ಪ್ರೇಮದಿಂದ ಶ್ರವಣಮಾಡಿದ್ದಾರೆ, ಸರ್ವ ದೋಷಗಳು ಓಡಿ ಹೋಗುವವು, ಮತ್ತು ದೇಹ ಬುದ್ಧಿಯು ನಿಶ್ಯೇಶವಾಗಿ ಹೋಗಿ, ಅವರು ಗುರು ಕೃಪೆಗೆ ಪಾತ್ರರಾಗುತ್ತಾರೆ. ಎಂಬಲ್ಲಿಗೆ ಶ್ರೀ ಸಿದ್ಧಾರೂಢ ಕಥಾಮೃತದೊಳ್ ಶ್ರವಣ ಮಾತ್ರದಿಂದ ಸರ್ವಪಾಪಗಳನ್ನು ಭಸ್ಮ ಮಾಡುವಂಥ ಅತಿ ಮನೋಹರವಾದ ಈ ಮೂವತ್ತೈದನೇ ಅಧ್ಯಾಯವನ್ನು ಶಿವದಾಸನು ಶ್ರೀ ಸಿದ್ಧಾರೂಢ ಸದ್ಗುರುಗಳ ಚರಣಾರವಿಂದಗಳಲ್ಲಿ ಅರ್ಪಿಸಿರುವನು.